**ಸಾಕ್ಷಿಯನ್ನು ದಿಃ 13.01.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಈ.ಎಂ ವಕೀಲರಿಂದಃ–**

ನಾನು 16 ವರ್ಷಗಳಿಂದ ನೋಟರಿ ವಕೀಲರಾಗಿ ಕೆಲಸ ಮಾಡುತ್ತಿದ್ದೇನೆ ಅದರ ಜೊತೆಗೆ ನಾನು ವಕೀಲರ ವೃತ್ತಿ ಕೂಡ ಮಾಡುತ್ತಿದ್ದೇನೆ. ನನ್ನ ಕಛೇರಿಯಲ್ಲಿ ನೋಟರಿಯಲ್ಲಿ ಏನೆಲ್ಲಾ ದಾಖಲೆಗಳನ್ನು ಮಾಡಬಹುದೊ ಅಂತಹ ದಾಖಲೆಗಳನ್ನು ಮಾಡುತ್ತೇನೆ. ಯಾವುದೆ ಪತ್ರವನ್ನು ಬರೆಯಬೇಕೆಂದರೆ ಇ–ಸ್ಟಾಂಪ್ ದಾಖಲೆ ಪತ್ರ ಖರೀದಿಸಬೇಕಾಗುತ್ತದೆ ಎಂದರೆ ಸರಿ. ಹಾಗೆ ಯಾವ ಉದ್ದೇಶಕ್ಕಾಗಿ ಇ –ಸ್ಟಾಂಪ್ ಅನ್ನು ಖರೀದಿ ಮಾಡುತ್ತಿದ್ದೇವೆ ಎಂಬುದನ್ನು ನಮೂದಿಸಬೇಕಾಗುತ್ತದೆ ಎಂದರೆ ಪಕ್ಷಗಾರರು ತೆಗೆದುಕೊಂಡು ಬಂದರೆ ಆ ಬಗ್ಗೆ ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. ನಾನು ವಕೀಲಳಾದ ಕಾರಣ ಪಕ್ಷಗಾರರಿಗೆ ಸರಿಯಾಗಿ ಮಾಹಿತಿ ನೀಡುವ ಜವಾಬ್ದಾರಿ ಇರುತ್ತದೆ ಎಂದರೆ ಸರಿ. ಅನ್ ಡಿಮ್ಯಾಂಡ್ ಪ್ರನೋಟ್ ಬರೆಯಬೇಕಾದರೆ ಇ–ಸ್ಟಾಂಪ್ ಪೇಪರ್ ಸಹ ಅದೇ ಉದ್ದೇಶಕ್ಕಾಗಿ ಖರೀದಿ ಮಾಡಬೇಕಾಗುತ್ತದೆ ಎಂದರೆ ಸಾಕ್ಷಿ ಲೋನ್ ಅಗ್ರಿಮೆಂಟ್ ಗೆಂದು ಸದರಿ ದಾಖಲೆ ಪತ್ರವನ್ನು ತಂದಿದ್ದು, ಎರಡೂ ಉದ್ದೇಶವು ಸಾಲದ ಉದ್ದೇಶ ಆದ ಕಾರಣ ಅದರಲ್ಲಿ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ಲೋನ್ ಅಗ್ರಿಮೆಂಟ್ ಅಂದರೆ ಕರಾರಿಗೆ ಸಂಬಂಧಪಟ್ಟಿದ್ದು, ಆನ್ ಡಿಮ್ಯಾಂಡ್ ಎಂದರೆ ಹಣ ಸಂದಾಯ ರಶೀದಿ ಇರುತ್ತದೆ ಎಂದರೆ ಎರಡೂ ಒಂದೆ ಉದ್ದೇಶಕ್ಕೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಲೋನ್ ಅಗ್ರಿಮೆಂಟ್ ಬೇರೆ, ಆನ್ ಡಿಮ್ಯಾಂಡ್ ಪ್ರನೋಟ್ ಮತ್ತು ಹಣ ಸಂದಾಯ ರಶೀದಿ ಬೇರೆ ಎಂದರೆ ಸರಿಯಲ್ಲ.

ಆನ್ ಡಿಮ್ಯಾಂಡ್ ಪ್ರನೋಟ್ ಜೊತೆಗೆ ಆಧಾರ ಪತ್ರ ಎಂದು ಬರೆಯಬಹುದಾ ಎಂದರೆ ಪಕ್ಷಗಾರರ ಒಪ್ಪಿಗೆ ಮೇರೆಗೆ ಆ ರೀತಿ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ಕಾನೂನಿನಲ್ಲಿ ಅವಕಾಶ

ಇಲ್ಲದಿದ್ದರೂ ಪಕ್ಷಗಾರರು ಹೇಳಿದ ಮೇರೆಗೆ ಬರೆಯಬಹುದಾ ಎಂದರೆ ಸಾಕ್ಷಿ ಪಕ್ಷಗಾರರು ಹಿರಿಯ ವ್ಯಕ್ತಿ ಇದ್ದು, ಆ ಸಮಯದಲ್ಲಿ ಕೋವಿಡ್ –19 ಇದ್ದ ಕಾರಣ ತಕ್ಷಣ ರಿಜಿಸ್ಟ್ರೇಶನ್ ಮಾಡಿಸಿಕೊಳ್ಳಲು ಆಗುವುದಿಲ್ಲ ಎಂದು ಅವರು ಬಲವಂತ ಮಾಡಿದ್ದಕ್ಕೆ ಬರೆದಿದ್ದೆ ಎನ್ನುತ್ತಾರೆ. ಸಾಮಾನ್ಯವಾಗಿ ಆನ್ ಡಿಮ್ಯಾಂಡ್ ಬರೆಯಬೇಕಾದರೆ ಪಕ್ಷಗಾರರ ಹತ್ತಿರ ಪೋಟೊ ಮತ್ತು ಆಧಾರ ಕಾರ್ಡ ತೆಗೆದುಕೊಂಡಿದ್ದೆ. ಆ ದಿನ ಆನ್ ಡಿಮ್ಯಾಂಡ್ ಪ್ರನೋಟ್ ಬರೆಯುವ ಕಾಲಕ್ಕೆ ಅಧಾರ್ ಕಾರ್ಡ ಅನ್ನು ಪಡೆದುಕೊಂಡಿದ್ದೆ. ನಾನು ಬರದಿರುವಂತಹ ಆಧಾರ ಪತ್ರ ನೊಂದಣಿ ಕಛೇರಿಯಲ್ಲಿ ಕಡ್ಡಾಯವಾಗಿ ನೊಂದಣಿ ಆಗುವಂತಹ ದಾಖಲೆ ಎಂದರೆ ಸರಿ. 5–5 ಲಕ್ಷದ ಎರಡೂ ಬ್ಯಾಂಕ್ ಆಫ್ ಬರೋಡಾದ ಚೆಕ್ ಗಳು, ಅಸೆಸ್ ಮೆಂಟ್ ಕಾಪಿ, 13 ವರ್ಷದ ಇ.ಸಿ ಮತ್ತು ಶುದ್ಧ ಕ್ರಯ ಪತ್ರದ ಬಗ್ಗೆ ಆನ್ ಡಿಮ್ಯಾಂಡ್ ನಲ್ಲಿ ಬರೆಯಬಹುದಾ ಎಂದರೆ ಸಾಕ್ಷಿ ಪಕ್ಷಗಾರರು ಸೇರಿಸಿ ಎಂದು ಹೇಳಿದ ಮೇರೆಗೆ ಹಾಗೆ ಸೇರಿಸಿದ್ದೆ ಎಂದು ನುಡಿಯುತ್ತಾರೆ. ಪಕ್ಷಗಾರರು ಏನೇ ಹೇಳಿದರೂ ಆ ರೀತಿ ಬರೆಯುತ್ತಿರಾ ಎಂದರೆ ಸಮಂಜಸವೆನಿಸಿದರೆ ಬರೆಯುತ್ತೇನೆ ಎಂದು ನುಡಿಯುತ್ತಾರೆ.

ಆನ್ ಡಿಮ್ಯಾಂಡ್ ಪ್ರನೋಟ್ ನಲ್ಲಿ ಷಡ್ಯೂಲ್ ಅನ್ನು ನಮೂದಿಸಬಹುದಾ ಎಂದರೆ ಒಂದು ತಿಂಗಳ ನಂತರ ಅದನ್ನು ರಿಜಿಸ್ಟರ್ ಮಾಡಿಸಿಕೊಳ್ಳುತ್ತೇವೆ ಎಂದು ಹೇಳಿದ ಕಾರಣ ಪಕ್ಷಗಾರರು ಹೇಳಿದ ಮೇರೆಗೆ ಸೇರಿಸಿದ್ದೇನೆ ಎನ್ನುತ್ತಾರೆ. ನಮ್ಮ ಕಛೇರಿಯಲ್ಲಿ ಸಿಸಿ ಕ್ಯಾಮೇರಾ ಅಳವಡಿಸಿಲ್ಲ. ಸಾಕ್ಷಿದಾರರಾದ ಜಯಂತ್ ಎಂಬುವವರು ಪ್ರತಿವಾದಿಯ ಮಗ ಮತ್ತು ರವಿಕುಮಾರ್ ಹೆಚ್.ಕೆ ವಾದಿಯ ಮಗ ಆಗಿದ್ದರು. ಸಾಕ್ಷಿದಾರರನ್ನಾಗಿ ಸಹಿ ಮಾಡಿಸಬೇಕಾದರೆ ಮನೆಯ ಸದಸ್ಯರನ್ನು ಹೊರತು ಪಡಿಸಿ ಹಾಕಿಸಬೇಕಾಗುತ್ತದೆ ಎಂದರೆ ಆ ಸಮಯದಲ್ಲಿ ಕೋರೊನ ಇದ್ದ ಕಾರಣ ಆ ರೀತಿ ಅವರನ್ನೆ ಸೇರಿಸಿದ್ದೆ ಎನ್ನುತ್ತಾರೆ. ವಾದಿಯ ಮಗನೆ ಆನ್ ಡಿಮ್ಯಾಂಡ್ ಪ್ರನೋಟ್ ಗೆ ಸಹಿ ಮಾಡಿದ್ದರಿಂದ ಅದು ಊರ್ಜಿತ ಅಲ್ಲ ಎಂದರೆ ಸರಿಯಲ್ಲ. ನಮ್ಮ ಕಛೇರಿಯಲ್ಲಿ ಯಾವುದೆ ಹಣದ ವ್ಯವಹಾರ ನಡೆದಿಲ್ಲ ಎಂದರೆ

ಸರಿಯಲ್ಲ. ಅದೆ ರೀತಿ ನಾನು ನಿಗದಿತವಾದಂತಹ ಆನ್ ಡಿಮ್ಯಾಂಡ್ ಪ್ರನೋಟ್ ನಲ್ಲಿ ಪತ್ರ ಬರೆದಿಲ್ಲ ಎಂದರೆ ಸರಿಯಲ್ಲ. ನಿಪಿ. 1 ರಲ್ಲಿ ಲೋನ್ ಅಗ್ರಿಮೆಂಟ್ ಎಂದು ಇರುವ ಕಾರಣ ಸದರಿ ಪತ್ರ ಊರ್ಜಿತವಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.